

## ಕಮಲಶಿಲೆಯಲ್ಲಿ ಗುಹೆ ದೇಗುಲ

ಉಡುಪಿಯ ಕುಂದಾಪುರದಿಂದ ಸುಮಾರು ಮೂವತ್ತೈದು ಕಿ.ಮೀ. ದೂರದಲ್ಲಿ ಕಮಲಶಿಲೆ ಎಂಬ ಪ್ರದೇಶವಿದ್ದು, ಅಲ್ಲಿ ಬ್ರಾಹ್ಮೀ ದುರ್ಗಾ ಪರಮೇಶ್ವರಿ ದೇವಿ ನೆಲೆಸಿದ್ದಾಳೆ. ಅಲ್ಲಿಂದ ಎರಡೂವರೆ ಕಿ.ಮೀ. ಸಾಗಿದರೆ ದೇವಿಯ ಮೂಲ ಗುಹೆ ಸಿಗುತ್ತದೆ. ಇದನ್ನು ಸುಪಾರ್ಶ್ವ ಗುಹೆ ಎಂದೂ ಕರೆಯಲಾಗುತ್ತದೆ. ಈ ಹೆಸರಿನ ರಾಜನು ಸುರಕ್ಷಿತ ಜಾಗ ಹುಡುಕಿಕೊಂಡು ಬಂದು, ಈ ಗುಹೆಯಲ್ಲಿ ಕುಳಿತು ತಪಗೈದ ಕಾರಣಕ್ಕೆ ಈ ಹೆಸರು ಬಂತೆಂಬುದು ಇಲ್ಲಿನವರ ನಂಬಿಕೆ. ಗುಹೆಯ ಕೆಳಗೆ ಇಳಿದು ಮುನ್ನಡೆದರೆ ಸುರಂಗದಂತೆ ದಾರಿ ಸಾಗುತ್ತಾ ಹೋಗುತ್ತದೆ. ಒಳಗೆ ಲಕ್ಷ್ಮಿ, ಸರಸ್ವತಿ, ಕಾಳಿ ದೇವತೆಗಳ ಸಂಗಮದ ಉದ್ಭವ ಮೂರ್ತಿಗಳಿವೆ. ಸರ್ಪತೀರ್ಥ ಎಂಬ ಸಣ್ಣ ಗುಂಡಿಯಿದ್ದು, ಮಳೆಗಾಲದಲ್ಲಿ ಒಮ್ಮೆ ನೀರು ಹರಿದು ಕುಬ್ಜಾನದಿ ಸೇರಿ ದೇವರ ಪಾದ ಸ್ಪರ್ಶಿಸಿ, ಪವಿತ್ರವಾಗುತ್ತಾಳೆ ಎಂಬುದು ಭಕ್ತರ ನಂಬಿಕೆ. ಒಳಗೆ ಬಾವಲಿಗಳ, ಹಾವುಗಳ ಸಂಚಾರವೂ ಇದೆ. ತೀರಾ ವಯಸ್ಸಾದವರಿಗೆ, ಮಕ್ಕಳಿಗೆ ಗುಹೆಯೊಳಗೆ ಇಳಿಯುವುದು ಕಷ್ಟವಾದರೂ ಸಾಮರ್ಥ್ಯವುಳ್ಳವರು ಒಮ್ಮೆ ನೋಡಲೇಬೇಕಾದ ಕ್ಷೇತ್ರವಿದು.

–ಪುಷ್ಪ ಎನ್.ಕೆ. ರಾವ್, ಉಡುಪಿ



## ಲೇಖನಿಗಳ ಕಾಲವೇ ಬಲುಚೆಂದ

ಹಿಂದಿನ ಕಾಲದಲ್ಲಿ ಕೈಬರಹಕ್ಕೆ ಬಳಸಲಾಗುತ್ತಿದ್ದ ಪೆನ್ನುಗಳಲ್ಲೂ ಎಷ್ಟೊಂದು ರೂಪ, ಅದೆಷ್ಟು ವೈವಿಧ್ಯ. ಚಿತ್ರದಲ್ಲಿ ಅಂತಹ ಕೆಲವು ಮಾದರಿಗಳನ್ನು ಕಾಣಬಹುದು. ಇಂದಿನ ಡಿಜಿಟಲ್ ಕಚೇರಿ ಯುಗದಲ್ಲಿ ಲೇಖನಿಗಳು ತಮ್ಮ ಮೊದಲಿನ ಮಹತ್ವ ಕಳೆದುಕೊಂಡಿವೆ.

ಪೆನ್ನು ಖರೀದಿಸುವ ಅದೊಂದು ಕಾಲವೇ ಬಲುಚೆಂದವಾಗಿತ್ತು. ಹೊಸ ಮಾದರಿಯ ಪೆನ್ನು ಕಂಡರೆ ನಮ್ಮ ಸಂಗ್ರಹಕ್ಕೂ ಅದೊಂದು ಇರಲಿ ಎಂದು ಖರೀದಿಸುವುದು, ಪೆನ್ನಿನ ರೀಫಿಲ್ ಖಾಲಿಯಾದಾಗ ಅದನ್ನು ಎಸೆಯದೆ ಕಾಪಿಟ್ಟುಕೊಳ್ಳುವುದು ಅನೇಕರ ಹವ್ಯಾಸವೇ ಆಗಿತ್ತು. ಮರದಿಂದ ತಯಾರಿಸಿದ ಅತ್ಯಾಕರ್ಷಕ ಮಾದರಿಗಳು ಈಗಲೂ ಹಲವರ 'ಪೆನ್ನು ಸಂಗ್ರಹಾಲಯ'ದಲ್ಲಿ ಇವೆ. ಅಂದಿನ ಇಂಕ್ ಪೆನ್, ಆ ನಂತರದಲ್ಲಿ ಬಳಕೆಗೆ ಬಂದ ಬಾಲ್ ಪೆನ್ನುಗಳು ಒಂದಕ್ಕಿಂತ ಇನ್ನೊಂದು ಹೊಸ ಮಾದರಿಯಲ್ಲಿ ಮಾರಾಟಕ್ಕೆ ಬರುತ್ತಿದ್ದವು. ಕಂಪ್ಯೂಟರ್ ಮತ್ತು ಮೊಬೈಲ್‌ಗಳು ಹೆಚ್ಚು ಚಾಲ್ತಿಗೆ ಬಂದ ಬಳಿಕ ಪೆನ್ನಿನ ಕ್ರೇಜ್ ಬಹುತೇಕ ಕಡಿಮೆಯಾಗಿದೆ ಎನ್ನಬಹುದು.

–ಜಿ.ಎಂ. ಬೊಮ್ನಳ್ಳಿ, ಶಿರಸಿ





## ಆಕರ್ಷಕ ನವಗ್ರಹ ಗೋಪುರ ಮಂಟಪ

ಮಹಾರಾಷ್ಟ್ರದ ಅಹ್ಮದನಗರ ಜಿಲ್ಲೆಯ ಶನಿ ಶಿಂಗ್ನಾಪುರದ ಶನೈಶ್ವರ ದೇವಾಲಯವು ಪ್ರಸಿದ್ಧ ಕ್ಷೇತ್ರ. ಚಿತ್ರದಲ್ಲಿ ಕಾಣುವ ನವಗ್ರಹ ಮಂಟಪ ಗೋಪುರವು ಅಲ್ಲಿನ ಪ್ರಮುಖ ಆಕರ್ಷಣೆಗಳಲ್ಲೊಂದಾಗಿದೆ. ಈ ನವಗ್ರಹ ಮಂಟಪವು ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತು ಗ್ರಹಗಳ ಪ್ರತಿಕೃತಿಯಾಗಿದೆ. ಪ್ರತಿಯೊಂದು ಗ್ರಹವೂ ವೈಯಕ್ತಿಕ ಗ್ರಹಸ್ಥಿತಿಯನ್ನು ಮತ್ತು ನಮ್ಮ ಜೀವನದ ವಿವಿಧ ಕ್ಷೇತ್ರಗಳನ್ನು ನಿಯಂತ್ರಿಸುತ್ತದೆ ಎಂಬುದು ಭಕ್ತರ ನಂಬಿಕೆ. ಅದಕ್ಕನುಗುಣವಾಗಿ ವಿಶೇಷ ಆಕೃತಿಗಳಲ್ಲಿ ಈ ಮಂಟಪ ನಿರ್ಮಿಸಲಾಗಿದೆ.

ಶನಿ ದೇವರನ್ನು ಎತ್ತರದ ಗೋಪುರದಲ್ಲಿಟ್ಟು, ಇತರ ಗ್ರಹಗಳನ್ನು ಕಡಿಮೆ ಎತ್ತರದ ಗುಡಿಗಳಿಂದ ಸುತ್ತುವರೆಸಲಾಗಿದೆ. ನಡು ಗೋಪುರದ ಮೇಲ್ಭಾಗದಲ್ಲಿ 9 ಅಂತಸ್ತುಗಳಿದ್ದು, ಗ್ರಹಗಳ ಚಕ್ರಾಕಾರದ ಸ್ಥಿತಿಯನ್ನು ಸೂಚಿಸುತ್ತದೆ. ನವಗ್ರಹ ಶಾಂತಿಗೆ ಇದು ವಿಶೇಷ ಶಕ್ತಿ ಕೇಂದ್ರವೆಂದು ಭಕ್ತರು ನಂಬುತ್ತಾರೆ. ನವಗ್ರಹ ಪೂಜಾ ಕ್ರಮದಲ್ಲಿ ತೈಲಾಭಿಷೇಕ, ದೀಪಾರಾಧನೆ ಮತ್ತು ತಾಮ್ರ ಪಾತ್ರೆಯಲ್ಲಿ ಅಗತ್ಯ ದ್ರವ್ಯಗಳಿಂದ ಗರ್ಭಗುಡಿ ಪೂಜೆಯನ್ನು ಇಲ್ಲಿ ನೆರವೇರಿಸಲಾಗುತ್ತದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ